ಆ) ಹಾಗಿದ್ದಲ್ಲಿ ಸಾರ್ವಜನಿಕರ ಈ ಮೂಲಭೂತವಾದ ಅವಶ್ಯಕತೆಯನ್ನು ಇಲಾಖೆ ಕೂಡಲೇ ಪೂರೈಸುವುದೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು): ಅ) ಉಡುಪಿ ತಾಲ್ಲೂಕಿನ ಕೆಂಜೂರು ಮತ್ತು 41 ಶಿರೂರು ಗ್ರಾಮಗಳನ್ನು ಈಗಾಗಲೇ ವಿದ್ಯುದ್ದೀಕರಿಸಲಾಗಿದೆ. ಆದರೆ 41ನೇ ಶಿರೂರು ಗ್ರಾಮದ ಮಜರೆಗಳಾದ ಕಾಪಾಡಿ, ನೇಮಟ್ಟು ಮತ್ತು ಅಂಬಡೆ ಬಾಗ್ಯಾರು ಈ ಸ್ಥಳಗಳಿಗೆ ಇದುವರೆಗೆ ವಿದ್ಯುತ್ ಸಂಪರ್ಕ ಒದಗಿಸಿಲ್ಲ.

ಆ) 1994-95ರ ಸಾಲಿನಲ್ಲಿ ಈ ಮಜರೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ವಿಷಯವನ್ನು ಗಮನಿಸಲಾಗುವುದು.

ಕೇಂದ್ರ ಸರ್ಕಾರದ ಯೋಜನೆ ಅನ್ವಯ ಎನ್. ಡಬ್ಲ್ಯೂ ಎಂ.ಪಿ. ಸ್ಕೀಮ್ ಅಡಿಯಲ್ಲಿ ಅಂಜನಾಪುರ-ಅಂಬ್ಲಿಗೊಳ ಜಲಾಶಯದ ಅಭಿವೃದ್ಧಿಗೆ ಹಣ ಮಂಜೂರು ಮಾಡುವ ಬಗ್ಗೆ

448 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಯೋಜನೆ ಅನ್ವಯ (470ನೆ ಪೆನ್ಶನ್ಲಿ) ಎನ್.ಡಬ್ಲ್ಯೂ.ಎಮ್.ಪಿ. ಯೋಜನೆ ಅಡಿಯಲ್ಲಿ ಅಂಜನಾಪುರ-ಅಂಬ್ಲಿಗೊಳ ಜಲಾಶಯದ ಅಭಿವೃದ್ಧಿಗೆ ಹಣ ಮಂಜೂರಾಗಿದೆಯೇ?

ಆ) ಈ ಯೋಜನೆ ಅನ್ವಯ ಈ ಎರಡು ಜಲಾಶಯದ ಅಡಿಯಲ್ಲಿ ಈವರೆಗೆ ಆಗಿರುವ ಪ್ರಗತಿ ಎಷ್ಟು?

ಇ) ಈವರೆಗೆ ಪಾವತಿ ಮಾಡಿರುವ ಹಣವೆಷ್ಟು?

ಈ) ಶಿಕಾರಿಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆ ವತಿಯಿಂದ 2702 ಪೆನ್ಶನ್ ಕೆಳಗೆ ಕೆರೆ ಕಾಮಗಾರಿ ಕೆಲಸ ನಡೆದಿದ್ದು ಅದೇ ರೀತಿ 2701 ಪೆನ್ಶನ್ ಕೆಳಗೆ ಕಾಮಗಾರಿ ಕೆಲಸಗಳಾಗಿದ್ದು, ಈ ಬಗ್ಗೆ ಹಣ ಬಿಡುಗಡೆ ಮಾಡದಿರಲು ಕಾರಣವೇನು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಮಂಜೂರಾಗಿದೆ

ಆ)

ಅಂಜನಾಪುರ	ಅಂಬ್ಲಿಗೊಳ
ರೂ. 8.24 ಲಕ್ಷಗಳಷ್ಟು ಪ್ರಗತಿಯಾಗಿರುತ್ತದೆ	ರೂ. 8.76 ಲಕ್ಷ ಗಳಷ್ಟು ಪ್ರಗತಿಯಾಗಿರುತ್ತದೆ.

ಇ) ಅಂಜನಾಪುರ - ರೂ. 7.00 ಲಕ್ಷಗಳು
ಅಂಬ್ಲಿಗೊಳ - ರೂ. 8.76 ಲಕ್ಷಗಳು

ಈ) ಹಣವನ್ನು ಕಾಲಕಾಲಕ್ಕೆ ಸರಿಯಾಗಿ ಬಿಡುಗಡೆ ಮಾಡಲಾಗಿದೆ.

ಸಾಗರ ಸೊರಬ, ಶಿಕಾರಿಪುರ 110 ಕೆ.ವಿ. ಸಬ್ ಸ್ಟೇಷನ್ ಮಂಜೂರಾತಿ ಬಗ್ಗೆ

445 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರ - ಸೊರಬ - ಶಿಕಾರಿಪುರ 110 ಕೆ.ವಿ. ಸಬ್ ಸ್ಟೇಷನ್ ಮಂಜೂರಾಗಿರುವುದು ನಿಜವೇ?

ಅ) ಈ ಕಾಮಗಾರಿಗಾಗಿ ಸರ್ಕಾರದಿಂದ ಆಗಿರುವ ಖರ್ಚು ಎಷ್ಟು?

ಆ) ಈ ಕಾಮಗಾರಿ ಬಗ್ಗೆ ಕರೆದ ಟೆಂಡರ್ ಆಲಾಪಿಯಿಂದ ಅನುಮೋದನೆ ಸಿಕ್ಕಿದೆಯೇ?

ಈ) ಸಿಗದಿದ್ದಲ್ಲಿ ಅದಕ್ಕೆ ಕಾರಣವೇನು?

ಉ) ಶಿಕಾರಿಪುರ ತಾಲ್ಲೂಕಿಗೆ ಈ ಸಬ್ ಸ್ಟೇಷನ್ ಆಗದಿದ್ದರೆ, ವಿದ್ಯುತ್ ಸರಬರಾಜಿನ ವ್ಯವಸ್ಥೆಯೇ ಕುಸಿದು ಬೀಳುವ ಸಂಭವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಹೌದು.

ಆ) ಫೆಬ್ರವರಿ 94ರ ಅಂತ್ಯದವರೆಗೆ ಖರ್ಚಾಗಿರುವ ಪಾವತಿ ಮೊತ್ತ ರೂ. 3,39,295-00

ಇ) ಇಲ್ಲ.

ಈ) ಟರ್ನ್‌ಕೀ ಆಧಾರದ ಮೇಲೆ ಕರೆಯಲಾಗಿರುವ ಟೆಂಡರ್‌ಗಳನ್ನು ಪರಿಶೀಲಿಸಲಾಗುತ್ತಿದ್ದು ಪರಿಶೀಲನೆಯ ನಂತರ ಇತ್ಯರ್ಥಪಡಿಸಲಾಗುವುದು.

ಉ) ಶಿಕಾರಿಪುರ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ವ್ಯವಸ್ಥೆಯಲ್ಲಿ ಪ್ರಸ್ತುತ ತಲೆದೋರಿರುವ ಸಮಸ್ಯೆಗಳು ಮುಂದಕ್ಕಿಂದ ಗಮನಕ್ಕೆ ಬಂದಿದ್ದು, ಸೊರಬದಲ್ಲಿ ಉದ್ದೇಶಿತ 110 ಕೆವಿ ಸಬ್ ಸ್ಟೇಷನ್ ಕಾರ್ಯಾಚರಣೆ ಮಾಡಿದ ನಂತರ ಪರಿಹಾರಗೊಳ್ಳುವುದು.

ಶಿಕಾರಿಪುರ ತಾಲ್ಲೂಕು ಸನ್ಯಾಸಿಕೊಪ್ಪ ಏತ ನೀರಾವರಿ ಯೋಜನೆ ಬಗ್ಗೆ

444 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕ್ ಸನ್ಯಾಸಿಕೊಪ್ಪ ಏತ ನೀರಾವರಿ ಯೋಜನೆ ಆಯವ್ಯಯದಲ್ಲಿ (ಬಜೆಟ್‌ನಲ್ಲಿ) ಯಾವ ಯಾವ ವರ್ಷ ಸೇರಿದೆ?

ಆ) ಶಿಕಾರಿಪುರ ತಾಲ್ಲೂಕಿನ ಬರಗಾಲ ಪೀಡಿತ ರೈತರಿಗೆ ವರದಾನವಾಗುವ ಈ ಕೆಲಸ ಪ್ರಾರಂಭಿಸದಿರಲು ಕಾರಣವೇನು?

ಇ) ಶಿವಮೊಗ್ಗ ಜಿಲ್ಲೆಯಲ್ಲಿ ಈ ಶಿಫ್ಟ್ ಇರಿಗೇಷನ್ ಆಲಾಪಿಯಿಂದ ಯಾವ ಯಾವ ಕಾಮಗಾರಿ ಕೈಗೊಳ್ಳಲಾಗಿದೆ?

ಡಾ|| ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಈ ಏತ ನೀರಾವರಿ ಯೋಜನೆಯು 1984-85ರಿಂದೀಚೆಗೆ ಆಯವ್ಯಯದಲ್ಲಿ ಸೇರಿರುವುದಿಲ್ಲ.

ಆ) ಈ ಯೋಜನೆಯ ಅಚ್ಚುಕಟ್ಟು ಪ್ರದೇಶವು ಅಂಜಾನಪುರ ಜಲಾಶಯದ ಬಲನಾಲೆಯ ಅಚ್ಚುಕಟ್ಟು ಪ್ರದೇಶದಲ್ಲಿ ಬರುವುದರಿಂದಲೂ ಹಾಗೂ ಈ ಯೋಜನೆಗೆ ನೀರಿನ ಆಸರೆಗಾರಿ ಕುಮದ್ವತಿ ನದಿಯಲ್ಲಿ ನೀರು ಸಾಕಷ್ಟು ಲಭ್ಯವಿಲ್ಲದಿರುವುದರಿಂದ ಈ ಕೆಲಸವನ್ನು ಪ್ರಾರಂಭಿಸಿಲ್ಲ.

ಇ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಯಾವ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.